**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 21.07.2021.

**1] ಸಂಚಾರಿ ಪೊಲೀಸ ಠಾಣೆ ಗುನ್ನೆ ನಂ: 88/2021 ಕಲಂ: 279, 304(ಎ) ಐಪಿಸಿ**

ದಿನಾಂಕ: ದಿನಾಂಕ 19.07.2021 ರಂದು 20:30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ಮಲ್ಲೇಲಾ ರವಿಕುಮಾರ ಮಲ್ಲೇಲಾಜನಾರ್ಧನರಾವ್ ವಯಾ 34 ವರ್ಷ ಸಾ: ಸ್ವಾಮವರಂ ನಂದಿಗ್ರಾಮ ಮಂಡಲಂ ಜಿ:ಕೃಷ್ಣಾ ರಾಜ್ಯ ಆಂದ್ರಪ್ರದೇಶ ಈತನು ಎನ್‌ಎಚ್ 52 ರೋಡ ಸರ್ವಿಸ್ ರೋಡದಲ್ಲಿ ಅಶೋಕ ಲೈಲಾಂಡ ಶೋರುಂ ಮುಂದೆ ತಾನು ಚಾಲನೆ ಮಾಡುತ್ತಿದ್ದ ಲಾರಿ ನಂಬರ ಎಪಿ:16 ಟಿವಾಯ್:9998 ನೇದ್ದನ್ನು ಒಮ್ಮಲೆ ರಿವರ್ಸಾಗಿ ದುಡುಕಿನಿಂದ ಹಿಂದೆ ಮಂದೆ ನೋಡದೆ ನಿರ್ಲಕ್ಷತನದಿಂದ ನಡೆಯಿಸಿ ಪಿರ್ಯಾಧಿಯ ಲಾರಿ ನಂಬರ ಎಪಿ:31 ಟಿಎಮ್:2322 ನೇದ್ದರ ಮುಂದಿನ ಗ್ಲಾಸನ್ನು ಓರೆಸುತ್ತಿದ್ದ ಲಾರಿಯ ಕ್ಲೀನರನಾದ ಕಲ್ಪಲಾ ದಯಾಕರ ರಾವ್ ತಂದೆ ಕುಟುಂಬರಾವ್ ವಯಾ 35 ವರ್ಷ ಜಾತಿ ಹಿಂದೂ ಹೊಲೇರ ಸಾ: ಗುಮ್ಮಡಿದೂರು ಪೆನುಗಂಚಿಪ್ರೋಲು ಮಂಡಲ್ ಜಿ:ಕೃಷ್ಣಾ ರಾಜ್ಯ ಆಂದ್ರಪ್ರದೇಶ ಇವರಿಗೆ ಹಾಯಿಸಿ ಅಪಘಾತ ಮಾಡಿ ಭಾರಿ ಸ್ವರೂಪದ ಗಾಯಗೊಳಿಸಿದ್ದು ಇದರ ಉಪಚಾರಕ್ಕೆ ವಿಜಯಪೂರದ ಭಾಗ್ಯವಂತಿ ಆಸ್ಪತ್ರೆಯಲ್ಲಿ ಉಪಚಾರಕ್ಕೆ ದಾಖಲಿಸಿದಾಗ ಉಪಚಾರ ಫಲಿಸದೆ ಮೃತಪಟ್ಟಿದ್ದು ಇರುತ್ತದೆ ಅಂತಾ ಪಿರ್ಯಾಧಿಯಲ್ಲಿ ನಮೂದು ಇರುತ್ತದೆ. ಈ ಬಗ್ಗೆ ಬಾಬುರಾವ್ ಏಸುರತ್ನಂ ಸಾ: ಗುಮ್ಮಡಿದೂರು ಪೆನುಗಂಚಿಪೋಲು ಮಂಡಲ ಜಿ: ಕೃಷ್ಣಾ ರಾಜ್ಯ ಆಂದ್ರಪ್ರದೇಶ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 20.07.2021 ರಂದು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಆಲಮೇಲ ಪೊಲೀಸ ಠಾಣೆ ಗುನ್ನಾ. ನಂ: 87/2021 ಕಲಂ: 15[ಎ] 32 [3] ಕೆ.ಇ.ಆ್ಯಕ್ಟ**

ದಿನಾಂಕ 19.07.20 ರಂದು 16.50 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 1] ಶರಣಪ್ಪ ಗಂಗಪ್ಪ ಬಳ್ಳೂರಗಿ ಸಾ: ದೇವಣಗಾಂವ ತಾ: ಸಿಂದಗಿ ಜಿ: ವಿಜಯಪುರ ಈತನು ತನ್ನ ಪಾಯಿದೆ ಸಲುವಾಗಿ ಸರಕಾರದಿಂದಾಗಲಿ ಮತ್ತು ಅಬಕಾರಿ ಇಲಾಖೆಯಿಂದಾಗಲಿ ಲೈಸನ್ಸ್ ವ ಪರವಾನಿಗೆ ಪಡೆದುಕೊಳ್ಳದೇ ತನ್ನ ಕೊಲ್ಡ್ರಿಂಕ್ಸ್ ಅಂಗಡಿಯ ಮುಂದೆ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಸ್ಥಳಾವಕಾಶ ಮಾಡಿಕೊಟ್ಟು ಅವರಿಗೆ ನೀರು ಮತ್ತು ತಿನ್ನಲಿಕ್ಕೆ ಸ್ನಾಕ್ಷ ಕೊಟ್ಟು ಸಹಾಯ ಸಹಕಾರ ಮಾಡಿದ ಅಪರಾಧ. ಈ ಬಗ್ಗೆ ಸ:ತ: ಸುರೇಶ್ ಆರ್ ಗಡ್ಡಿ ಪಿ.ಎಸ್.ಐ ಆಲಮೇಲ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 20.07,2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಝಳಕಿ ಪೊಲೀಸ ಠಾಣೆ ಗುನ್ನಾ. ನಂ: 65/2021 ಕಲಂ: 78(3) ಕೆ.ಪಿ ಆ್ಯಕ್ಟ.**

ದಿನಾಂಕ 20.07.2021 ರಂದು 13.15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಸಾಗರ ಚಿದಾನಂದ ತಳವಾರ ಸಾ: ಅರ್ಜನಾಳ ತಾ: ಇಂಡಿ ಈತನು ಇಂಡಿ ತಾಲೂಕಿನ ಅರ್ಜನಾಳ ಗ್ರಾಮದ ಹನುಮಾನದೇವರ ದೇವಸ್ತಾನದ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಸರಕಾರದಿಂದ ಯಾವುದೇ ಅನುಮತಿ ವ ಲೈಸನ್ಸ್‌ನ್ನು ಪಡೆಯದೆ ಒಂದು ರೂಪಾಯಿಗೆ 80/-ರೂ. ಕೊಡುವ ಕರಾರಿನ ಮೇಲೆ ಕಲ್ಯಾಣಿ ಅಂಬುವ ಮಟಕಾ ಓ.ಸಿ.ಜೂಜಾಟವನ್ನು ಸಾರ್ವಜನಿಕರಿಂದ ಹಣ ಪಡೆದು ತಮ್ಮ ಪಾಯ್ದೇಗೋಸ್ಕರ ನಡೆಸುತ್ತಿರುವಾಗ 465/-ರೂಪಾಯಿ ನಗದು ಹಣ ಹಾಗೂ ಓ.ಸಿ ನಂಬರಗಳನ್ನು ಬರೆದುಕೊಂಡಿರುವ ಚೀಟಿ ಒಂದು ಹಾಗೂ ಒಂದು ಬಾಲ್ ಪೆನ್‌ದೊಂದಿಗೆ ಸಿಕ್ಕಿದ್ದು ಈ ಬಗ್ಗೆ ಸ:ತ: ಪಿ.ಎನ್. ಮನಗೂಳಿ ಪಿ.ಎಸ್.ಐ ಝಳಕಿ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 20.07,2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.